ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ,ಹೊಸ ಸಾರ್ವಜನಿಕ ಕಚೇರಿಗಳು, ನೃಪತುಂಗ ರಸ್ತೆ, ಬೆಂಗಳೂರು-೫೬೦ ೦೦೧**

ಎಡಿಎಂ2(2)ರಾಷ್ಟ್ರೀಯ ಹಬ್ಬ ಆಚರಣೆ 01/2014-15 ದಿನಾಂಕ:12-08-2014

**ಸುತ್ತೋಲೆ**

ವಿಷಯ: ರಾಷ್ಟ್ರೀಯ ಹಬ್ಬಗಳಂದು ಎಲ್ಲಾ ಶಾಲೆಗಳ ಕಟ್ಟಡಗಳ ಮೇಲೆ ಧ್ವಜಾರೋಹಣ ಮಾಡುವ ಬಗ್ಗೆ.

ಉಲ್ಲೇಖ: ಆಯುಕ್ತರ ನಿರ್ದೇಶನ ದಿನಾಂಕ: 12.08.2014.

---------.

ಮೇಲ್ಕಂಡ ವಿಷಯದಲ್ಲಿ ತಿಳಿಸಿದ ಹಾಗೆ ರಾಷ್ಟ್ರೀಯ ಹಬ್ಬಗಳ ಮಹತ್ವ, ಭಾವೈಕ್ಯತೆ ಹಾಗೂ ಪರಸ್ಪರ ಸಹಬಾಳ್ವೆ ಬಗ್ಗೆ ಶಾಲೆಗಳಲ್ಲಿನ ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಅರ್ಥಪೂರ್ಣವಾಗಿ ಹಮ್ಮಿಕೊಂಡು ರಾಷ್ಟ್ರ ಲಾಂಛನವಾದ ತ್ರಿವರ್ಣ ರಾಷ್ಟ್ರಧ್ವಜವನ್ನು ಸರ್ಕಾರಿ/ಅನುದಾನಿತ ಮತ್ತು ಅನುದಾನ ರಹಿತ ಪ್ರಾಥಮಿಕ/ಪ್ರೌಢ ಶಾಲೆಗಳಲ್ಲಿನ ಕಟ್ಟಡಗಳ ಮೇಲೆ ಗೌರವಯುತವಾಗಿ ನಿಗಧಿತ ಸಮಯದಲ್ಲಿ ಆರೋಹಣ ಮಾಡಿ ನಂತರ ಅದನ್ನು ಜೋಪಾನವಾಗಿ ಇಳಿಸಿ ಸಂರಕ್ಷಿಸುವ ಬಗ್ಗೆ ಎಲ್ಲಾ ಶಿಕ್ಷಣ ಸಂಸ್ಥೆಗಳಿಗೆ ತಿಳಿದ ವಿಷಯ.

ಆದ್ದರಿಂದ ಪ್ರತಿ ವರ್ಷ ರಾಷ್ಟ್ರೀಯ ಹಬ್ಬಗಳಾದ 15ನೇ ಆಗಸ್ಟ್ ಮತ್ತು ಜನವರಿ 26 ರಂದು ಅನುಕ್ರಮವಾಗಿ ಸ್ವಾತಂತ್ರ ದಿನಾಚರಣೆ ಹಾಗೂ ಗಣರಾಜ್ಯೋತ್ಸವ ದಿನಾಚರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕಾಗಿರುವುದು ಸರಿಯಷ್ಟೆ. ಯಾವುದೇ ಕಾರಣಕ್ಕೂ ರಜೆಯನ್ನು ಘೋಷಿಸುವುದಾಗಲೀ ಅಥವಾ ಶಾಲೆಯನ್ನು ಮುಚ್ಚಬಾರದು. ಈ ಸಂಬಂಧ ಎಲ್ಲಾ ಸರ್ಕಾರಿ/ ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳಲ್ಲಿ ಧ್ವಜಾರೋಹಣ ಕಾರ್ಯಕ್ರಮವನ್ನು ಈ ಕೆಳಕಂಡ ಸೂಚನೆಯನ್ನು ಪಾಲಿಸಲು ಸೂಚಿಸಲಾಗಿದೆ.

1. ರಾಷ್ಟ್ರೀಯ ತ್ರಿವರ್ಣ ಧ್ವಜವು ಹರಿದಿರಬಾರದು.
2. ತಳ ಕೆಳಕಾಗಿ ಧ್ವಜವನ್ನು ಹಾರಿಸಬಾರದು.
3. ನಿಗಧಿತ ಸಮಯದಲ್ಲಿ ಧ್ವಜಾರೋಹಣ ಮತ್ತು ಇಳಿಸಲು ಕ್ರಮವಹಿಸುವುದು.

ಕಡ್ಡಾಯವಾಗಿ ರಾಷ್ಟ್ರೀಯ ಹಬ್ಬಗಳನ್ನು ಆಚರಿಸಲು ತಿಳಿಸಿದೆ. ತಪ್ಪಿದಲ್ಲಿ ಸಂಬಂಧಿಸಿದವರನ್ನು ಹೊಣೆಗಾರರನ್ನಾಗಿ ಮಾಡಿ ಶಿಸ್ತು ಕ್ರಮ ವಹಿಸಲಾಗುತ್ತದೆ.

(ಮೊಹಮ್ಮದ್ ಮೊಹಸಿನ್)
ಆಯುಕ್ತರು.

ಗೆ:

**ರಾಜ್ಯದ ಎಲ್ಲಾ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಸೂಕ್ತ ಕ್ರಮಕ್ಕಾಗಿ.**

SKR\\Typing3server\e\D\Adm2\1047-14.doc